ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಬೆಂಗಳೂರು ನಗರದಲ್ಲಿ ಭಾರೀ ಮಳೆಯಿಂದ ಉಂಟಾದ ರಸ್ತೆ ಗುಂಡಿಗಳನ್ನು ಮುಚ್ಚಲು ಆಂದೋಲನ ಹಮ್ಮಿಕೊಳ್ಳಲು ಪಾಲಿಕೆ ನಿರ್ಧರಿಸಿದೆಯೇ ;

ಆ) ಇದಕ್ಕಾಗಿ ಗುರುತಿಸಿರುವ ರಸ್ತೆ ಗುಂಡಿಗಳೆಷ್ಟು ;

ಇ) ಇವುಗಳ ಪೈಕಿ ಎಷ್ಟು ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ;

ಈ) ಈ ಕಾಮಗಾರಿ ಕೆಲಸಕ್ಕೆ ಪಾಲಿಕೆಗೆ ತಗಲುವ ವೆಚ್ಚವೆಷ್ಟು ;

ಉ) ತಾತ್ಕಾಲಿಕ ಗುಂಡಿ ಮುಚ್ಚುವ ಕಾರ್ಯಕ್ಕೆ ಬದಲಾಗಿ ಶಾಶ್ವತವಾದ ರಸ್ತೆ ನಿರ್ಮಿಸಲು ಪಾಲಿಕೆ ಯಾವ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಎನ್.ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಹೌದು

ಆ) 2004 ಸೆಪ್ಟೆಂಬರ್ ಮಾಹೆಯಲ್ಲಿ 15441ರಸ್ತೆ ಗುಂಡಿಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸಿದೆ.

ಇ) ಗುರುತಿಸಿರುವ ಎಲ್ಲಾ ರಸ್ತೆ ಗುಂಡಿಗಳನ್ನು ಮುಚ್ಚಿಸಲಾಗಿದೆ.

ಈ) ರೂ. 1.50 ಕೋಟಿಗಳು

ಉ) ಶಾಶ್ವತವಾಗಿ ರಸ್ತೆ ನಿರ್ವಹಣೆಯನ್ನು ಮಾಡಲು 1228 ಕಿ.ಮೀ. ರಸ್ತೆಯನ್ನು ಬೆಂಗಳೂರಿನಲ್ಲಿ ಖಾಸಗೀಕರಣಗೊಳಿಸಿ 3 ವರ್ಷಗಳವರೆಗೆ ನಿರ್ವಹಣೆ ಮಾಡಲು ನವೆಂಬರ್ 2004ರ ಮಾಹೆಯಲ್ಲಿ ಕಾರ್ಯಾದೇಶ ನೀಡಲಾಗಿದೆ. ಇದಲ್ಲದೇ 1000 ಕಿ.ಮೀ. ಪೂರ್ಣ ಡಾಂಬರೀಕರಣಕ್ಕಾಗಿ ತೆಗೆದುಕೊಂಡಿರುವ ರಸ್ತೆಗಳ ಗುತ್ತಿಗೆ ಕರಾರಿನಲ್ಲಿ 3 ವರ್ಷಗಳ ಅವಧಿ ನಿರ್ವಹಣೆ ಅವಕಾಶ ಮಾಡಲಾಗಿದೆ.

286(423) ಶ್ರೀ ಪಿ.ಸಿ. ಮೋಹನ್(ಚಿಕ್ಕಪೇಟೆ) ಮತ್ತು ಶ್ರೀ ಆರ್. ಅಶೋಕ್(ಉತ್ತರಹಳ್ಳಿ) ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರಕ್ಕೆ ಮೆಟ್ರೋ ರೈಲ್ವೆನಂತಹ ಉತ್ತಮ ರೀತಿಯ ಸಂಪರ್ಕಜಾಲವನ್ನು ಸ್ಥಾಪಿಸಲು ಸರ್ಕಾರ ಯೋಜನೆ ರೂಪಿಸಿದೆಯೇ ?

ಆ) ಇದನ್ನು ದೆಹಲಿ ಮೆಟ್ರೋ ರೈಲುನಿಗಮ (ಡಿ.ಎಂ.ಆರ್.ಸಿ)ಕ್ಕೆ ನೀಡಲು ಉದ್ದೇಶಿಸಿದೆಯೆ;

ಇ) ಈ ಯೋಜನೆಯ ಸಾಧಕ-ಬಾಧಕಗಳೇನು ;

ಈ) ಬೆಂಗಳೂರಿನಲ್ಲಿ ಮೆಟ್ರೋ ರೈಲಿನ ಉದ್ದವೆಷ್ಟು ;

ಉ) ಇದನ್ನು ಜೋಡಿ ಮಾರ್ಗ ಕಲ್ಪಿಸಿ ರಚಿಸಲಾಗುವುದೆ, ಈ ಬಗ್ಗೆ ಈಗಾಗಲೇ ಸಮಗ್ರ ಯೋಜನಾ ವರದಿ ಸಲ್ಲಿಸಲಾಗಿದೆಯೇ :

ಊ) ಆ ವರದಿಯ ಮುಖ್ಯಾಂಶಗಳೇನು ;

ಋ) ಈ ಯೋಜನೆಯನ್ನು ರಾಜ್ಯದಲ್ಲಿ ಯಾವಾಗ ಪ್ರಾರಂಭಿಸಲಾಗುತ್ತದೆ ?

ಶ್ರೀ ಎನ್ .ಧರ್ಮಸಿಂಗ್(ಮುಖ್ಯಮಂತ್ರಿಗಳು) :

ಅ) ಹೌದು

ಆ) ಇಲ್ಲ

ಇ) ಸಾರ್ವಜನಿಕ ತ್ವರಿತ ಸಮೂಹ ಸಾಗಣೆ ವ್ಯೂಹವನ್ನು ಒದಗಿಸಲು, ಪರಿಸರ ಮಾಲಿನ್ಯ ತಡೆಗಟ್ಟಲು ಹಾಗೂ ರಸ್ತೆ ಅಪಘಾತಗಳ ಪ್ರಮಾಣವನ್ನು ಕಡಿಮೆಗೊಳಿಸುವ ಸಲುವಾಗಿ ಈ ಯೋಜನೆಯನ್ನು ಕೈಗೊಳ್ಳಲಾಗಿದೆ.

ಈ) 33 ಕಿ.ಮೀ.

ಉ) ಹೌದು, ಯೋಜನಾ ವರದಿಯನ್ನು ಪಡೆದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಭಾಗಿತ್ವವನ್ನು ಪಡೆಯಲು ತಿಳುವಳಿಕೆ ಪತ್ರ (MOU)ತಯಾರಿಸಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಊ) ಸಮಗ್ರ ಯೋಜನಾ ವರದಿಯಲ್ಲಿ ಅಂದರೆ ಪೂರ್ವ–ಪಶ್ಚಿಮ 18.10 ಕಿ.ಮೀ. ದಕ್ಷಿಣೋತ್ತರ 14.90 ಕಿ.ಮೀ. ಉದ್ದದ ಎರಡು ಮಾರ್ಗಗಳನ್ನು ಹೊಂದಿರುತ್ತದೆ. ದಟ್ಟಣೆ ಸಮಯದಲ್ಲಿ ಘಂಟೆ ಒಂದಕ್ಕೆ 40000 ಜನರನ್ನು ಒಯ್ಯಬಹುದು. ಒಟ್ಟಾಗಿ 2011ರ ವೇಳೆಗೆ 8.20 ಲಕ್ಷ ಜನರನ್ನು ಹಾಗೂ 2021ರ ವೇಳೆಗೆ 16.10 ಲಕ್ಷ ಜನರನ್ನು ಒಯ್ಯಬಹುದಾಗಿರುತ್ತೆ. ಯೋಜನಾ ವರದಿಯಂತೆ ಯೋಜನೆಯ ಒಟ್ಟು ವೆಚ್ಚ ರೂ. 4,989–00 ಕೋಟಿ ಇರುತ್ತೆ.

ಋ) ಎಲ್ಲಾ ರೀತಿಯ ನಿರುಪಾಧಿತಗಳು (ಕ್ಲಿಯರೆನ್ಸ್ ಪಡೆದುಕೊಂಡನಂತರ ಈ ಯೋಜನೆಯನ್ನು 2005 ರ ಮಧ್ಯಭಾಗದಲ್ಲಿ ಪ್ರಾರಂಬಿಸಲಾಗುವುದು.

287(407) ಶ್ರೀಮತಿ. ನಾಗಮಣಿ.ಎಂ.ಕೆ(ಕಿರುಗಾವಲು) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮಂಡ್ಯ ಜಿಲ್ಲೆಯ ಕಿರುಗಾವಲಿನಲ್ಲಿ ಬರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ;

ಆ) ಸರ್ಕಾರ ಈವರೆವಿಗೂ ಈ ಯೋಜನೆಗಳಿಗಾಗಿ ಖರ್ಚು ಮಾಡಿರುವ ಒಟ್ಟು ಹಣವೆಷ್ಟು;

ಇ) ಈ ಯೋಜನೆಗಳಿಗೆ ಬೇಕಾಗುವ ಹಣವೆಷ್ಟು ;

ಈ) ಈ ಯೋಜನೆಗಳನ್ನು ಮುಗಿಸಲು ಕಾಲಮಿತಿಯನ್ನು ನಿಗಧಿಗೊಳಿಸಲಾಗಿದೆಯೇ ಹಾಗೂ ಯಾವಾಗ ಮುಗಿಸಲಾಗುವುದು (ವಿವರ ಒದಗಿಸುವುದು) :

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಮಂಡ್ಯ ಜಿಲ್ಲೆಯ ಕಿರುಗಾವಲು ವಿಧಾನಸಭಾ ಕ್ಷೇತ್ರದಲ್ಲಿ 9 ಏತ ನೀರಾವರಿ ಯೋಜನೆಗಳು ಬರುತ್ತವೆ.

ಆ) ಈ ವರೆವಿಗೂ ಈ ಯೋಜನೆಗಳಿಗಾಗಿ ರೂ.77 ಲಕ್ಷ ಖರ್ಚು ಮಾಡಲಾಗಿದೆ.

ಇ) ಈ ಯೋಜನೆಗಳಿಗೆ ರೂ. 439.54 ಲಕ್ಷಗಳು ಬೇಕಾಗಿರುತ್ತದೆ.

ಈ) ಈ 9 ಯೋಜನೆಗಳ ಪೈಕಿ 1 ಯೋಜನೆ ಪೂರ್ಣಗೊಂಡಿದೆ, 6 ಯೋಜನೆಗಳ ಪ್ರಗತಿಯಲ್ಲಿದ್ದು ಇವುಗಳನ್ನು 2005ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಉಳಿಕೆ ಎರಡು ಕಾಮಗಾರಿಗಳ ಪ್ರಸ್ತಾವನೆ ಪರಿಶೀಲನೆಯಲ್ಲಿ ಇರುತ್ತದೆ.